ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ – 582 101
**Raitha Bhavana, General Cariappa Circle, Gadag – 582 101**
***Regional Office: Grameenabhivrudhi Bhavan, Ananda Rao Circle, Bengaluru-560 009***
**E-mail: ksrdpru@gmail.com** **Phone: 08372-230338**

**ದಿನಾಂಕ 7ನೇ ಡಿಸೆಂಬರ್ 2019 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ ಸಭಾ ಭವನದಲ್ಲಿ ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡವಳಿಗಳು**

# PROCEEDINGS OF THE SPECIAL MEETING OF THE EXECUTIVE COUNCIL HELD ON 07-12-2019 IN THE MEETING HALL, KSRDPR UNIVERSITY, GADAG

## MEMBERS PRESENT:

1. Prof. Dr. Suresh V. Nadagoudar — Chairperson & Ex-officio Member-Secretary
   Vice Chancellor (Acting), & Registrar,
   KSRDPRU,

2. Shri Abdul Hakim, — Member
   Social Worker, Educationist and Writer,
   # 3078, 1st Cross, Gayathrinagar, Bengaluru-21.

3. Prof. Dr. K.M. Hanumantharayappa, — Member
   Principal & Dean, Faculty of Law (Retd.)
   Bangalore University and
   Former Member, Karnataka State Law Commission
   Presently residing in Guntur, A.P.

4. Smt. N. Jamuna Urs, — Member
   Home Scientist (Retd.), J.S.S. KVK, Mysuru,
   # 904/7, 3rd Main Road, 1st Cross,
   Vidyaranyapuram, Mysuru-570 008.

5. Dr. Prakash Bhat, — Member
   Former C.E.O., Society for Community Participation and Empowerment (SCOPE), No.19, Bayalu, Hoysala Nagar, Haliyala Road, Dharwad-580 003.

6. Prof. N. Sivanna — Member
   Director I/c. Centre for Research, Innovation and Evaluation,
   KSRDPR University, Gadag.

7. Shri Bhaganna S. Badanalli, — Member
   Asst. Administrative Officer
   District Health & Family Welfare Office, Gadag
   Representing the Principal Secretary to Government,
   Health Department, Bengaluru.

8. Smt. Sudha C. Garag — Member
Labour Officer, Gadag District, Gadag
Representing the Principal Secretary to Government,
Labour Department, Bengaluru

**MEMBERS NOT PRESENT:**

1. Prof. Dr. R.S. Deshpande,
2. Shri G. B. Shivaraj,
3. Prof. T.V. Kattimani
Vice Chancellor, Indira Gandhi National Tribal University
Anuppur Dist. Madhya Pradesh
4. Dr. Arun R. Patil
Adhiti Adhyapakara agara, Hulikoti.
5. Shri B.G. Govindappa, Ex-MLA,
6. The Vice Chancellor
University of Agricultural Sciences, Bengaluru
7. The Vice Chancellor, VTU, Belagavi.
8. The Principal Secretary to Government,
Rural Development and Panchayat Raj Department
Govt. of Karnataka, Bengaluru.
9. The Principal Secretary to Government,
Department of Agriculture, Govt. of Karnataka, Bengaluru.
10. The Principal Secretary to Government,
Social Welfare Department, Govt. of Karnataka, Bengaluru.

ಪ್ರಾರಂಭದಲ್ಲಿ ಪ್ರೊ. ಡಾ. ಸುರೇಶ ವಿ. ನಾಡಗೌಡರ ಹಂಗಾಮಿ ಕುಲಪತಿಗಳು ಹಾಗೂ ಕುಲಸಚಿವರು ಎಲ್ಲ ಸದಸ್ಯರನ್ನು ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿದರು.

ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

At the outset, Prof. Dr. Suresh V. Nadagoudar, Vice Chancellor (Acting) and the Registrar welcomed all the Members for the Special meeting of the Executive Council.

Then the agenda was taken up for consideration.

**ವಿಷಯ ಸಂಖ್ಯೆ 1: ದಿನಾಂಕ 30 ನವೆಂಬರ್ 2019 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದನೆ ಬಗ್ಗೆ.**

**Subject No. 1: To consider and approve the Proceedings of the Finance Committee meeting held on 30th November 2019.**

**ಪರಾಮರ್ಷಿತ ಟಿಪ್ಪಣಿ:–**

ದಿನಾಂಕ 30 ನವೆಂಬರ್ 2019 ರಂದು ಬೆಳಗ್ಗೆ 11–00 ಗಂಟೆಗೆ ಪ್ರಾದೇಶಿಕ ಕಛೇರಿ, ಬೆಂಗಳೂರು, ಇಲ್ಲಿ ಜರುಗಿದ 3ನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ.

**Reference Note:**

The Proceedings of the 3rd meeting of the Finance Committee held on 30th November, 2019 at 11.00 a.m. in the Regional Office, Bengaluru, are placed before the Executive Council for kind consideration and approval. A Copy of the Proceedings is attached herewith.

**ನಿರ್ಣಯ**

ಅಧ್ಯಕ್ಷರು ಹಣಕಾಸು ಸಮಿತಿ ಸಭೆಯ ಮುಂದೆ ಮಂಡಿಸಲಾಗಿದ್ದ ಈ ಕೆಳಕಂಡ ವಿಷಯಗಳ ಬಗ್ಗೆ ಹಣಕಾಸು ಸಮಿತಿ ತೆಗೆದುಕೊಂಡಿರುವ ನಿರ್ಣಯಗಳ ಕುರಿತು ಸಭೆಗೆ ವಿವರಿಸಿದರು.

**ಅಜೆಂಡ: 1** – ಹಿಂದಿನ ಸಭೆಯ ನಡವಳಿಗಳನ್ನು ಓದಿ ಹೇಳಿ ದೃಢೀಕರಿಸುವುದು.

**ಅಜೆಂಡ: 2** – 2020–21ನೇ ಸಾಲಿನ ಆಯವ್ಯಯ ಸಲ್ಲಿಸುವ ಕುರಿತು.

ಅಂದಾಜುಗಳ ವಿವರ ಈ ರೀತಿ ಇದೆ.

| **ಭಾಗ–I**<br>**ಬಂಡವಾಳ ವೆಚ್ಚಗಳು (ಲೆಕ್ಕ ಶೀರ್ಷಿಕೆ: 4515–00–101–0–01–132)** | | |
|---|---|---|
| ಅ. | ವಿಶ್ವವಿದ್ಯಾಲಯಕ್ಕೆ ವಿವಿಧ ಕಟ್ಟಡಗಳ ನಿರ್ಮಾಣಕ್ಕಾಗಿ ಅಗತ್ಯವಿರುವ ಅನುದಾನ | ರೂ. 132.15 ಕೋಟಿ |
| ಆ. | ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಭೂಮಿ ಖರೀದಿಗೆ ಬೇಕಾಗುವ ಅನುದಾನ | ರೂ. 15.00 ಕೋಟಿ |
| | **ಒಟ್ಟು** | **ರೂ. 147.15 ಕೋಟಿ** |

| **ಭಾಗ–II**<br>**ವೇತನ (ಲೆಕ್ಕ ಶೀರ್ಷಿಕೆ: 2515–00–102–0–13–101 & 2515–00–102–0–13–115 )**<br>**ಹಾಗೂ ಸಾಮಾನ್ಯ ವೆಚ್ಚಗಳು (ಲೆಕ್ಕ ಶೀರ್ಷಿಕೆ: 2515–00–102–0–13–103)** | | |
|---|---|---|
| 1 | ವೇತನ ಹಾಗೂ ಭತ್ಯೆಗಳು | ರೂ. 4.88 ಕೋಟಿ |
| 2 | ಸಾಮಾನ್ಯ ವೆಚ್ಚಗಳು | ರೂ. 38.26 ಕೋಟಿ |
| | **ಒಟ್ಟು** | **ರೂ. 43.14 ಕೋಟಿ** |
| | | |
| | **ಭಾಗ–I + ಭಾಗ–II ಒಟ್ಟು** | **ರೂ. 190.29 ಕೋಟಿ** |

**ಅನುಮೋದಿಸಲ್ಪಟ್ಟ ಅಂದಾಜುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.**

**ಅಜೆಂಡ: 3** – ನಗದು ಪುಸ್ತಕವನ್ನು ಸಿಂಗಲ್ ಎಂಟ್ರಿ / ಡಬಲ್ ಎಂಟ್ರಿಯಲ್ಲಿ ನಿರ್ವಹಿಸುವ ಕುರಿತು.

**ಅಜೆಂಡ: 4** – ಮಹಾಲೇಖಪಾಲರ ಅಡಿಟ್ ವರದಿ ಕುರಿತು.

ಹಣಕಾಸು ಸಮಿತಿಯು 2020–21 ನೇ ಸಾಲಿನ ಹಣಕಾಸು ಅಂದಾಜುಗಳು (ಆಯವ್ಯಯ), ಡಬಲ್ ಎಂಟ್ರಿ/ ಸಿಂಗಲ್ ಎಂಟ್ರಿ ನಗದು ಪುಸ್ತಕ ನಿರ್ವಹಣೆ, ಲೆಕ್ಕ ಪರಿಶೋಧಕರ ವರದಿಗಳ ಬಗ್ಗೆ ತೆಗೆದುಕೊಂಡಿರುವ ನಿರ್ಣಯಗಳ ಬಗ್ಗೆ ಕಾರ್ಯನಿರ್ವಾಹಕ ಪರಿಷತ್ತು ಸುಧೀರ್ಘವಾಗಿ ಚರ್ಚಿಸಿತು.

1. ಆಯವ್ಯಯ ಅಂದಾಜುಗಳಲ್ಲಿ ನೂತನ ಕ್ಯಾಂಪಸ್‌ನಲ್ಲಿ ಕಟ್ಟಡಗಳ ನಿರ್ಮಾಣದ ವಿವರಗಳ ಕುರಿತು ಡಾ. ಪ್ರಕಾಶ್ ಭಟ್ ಅವರು ಮಾತನಾಡಿ (ಅನುಬಂಧ–1–ಅ) ನಲ್ಲಿ ಶಾಸನಬದ್ಧ ಅಧಿಕಾರಿಗಳ ವಸತಿ ನಿಲಯಗಳಿಗೆ ಪ್ರತಿ ಚದರ ಅಡಿಗೆ ನಮೂದಸಿರುವ ದರಗಳು ಬೇರೆ ಕಟ್ಟಡಗಳಿಗೆ, ಅಂದರೆ, ಕುಲಪತಿಗಳ, ಕುಲಸಚಿವರ ವಸತಿಗಳು ಮತ್ತಿತರ ಕಟ್ಟಡಗಳಿಗೆ ಹೋಲಿಸಿದರೆ, ಹೆಚ್ಚಾಗಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ಕಾರ್ಯಪಾಲಕ ಅಭಿಯಂತರರು ಇದನ್ನು ಪರಿಶೀಲಿಸಿ ತಪ್ಪುಗಳಿದ್ದರೆ ಸರಿಪಡಿಸುವಂತೆ ಅವರಿಗೆ ನಿರ್ದೇಶಿಸಲಾಯಿತು. ದಾಖಲೆಗಳನ್ನು ಪರಿಶೀಲಿಸಿದ ನಂತರ, ವಿಸ್ತೀರ್ಣ, ಪ್ರತಿ ಚದರ ಅಡಿಗೆ ನಮೂದಿಸಿರುವ ದರಗಳು ಇತ್ಯಾದಿಗಳ ಅಂಕಿ ಅಂಶಗಳನ್ನು ಸರಿಪಡಿಸಲಾಯಿತು. ತಿದ್ದುಪಡಿಮಾಡಿದ ತಃಖ್ತೆಯನ್ನು ನಡವಳಿಗಳಿಗೆ ಲಗತ್ತಿಸಲಾಗಿದೆ.

2. ನಗದು ಪುಸ್ತಕವನ್ನು ಡಬಲ್ ಎಂಟ್ರಿ/ ಸಿಂಗಲ್ ಎಂಟ್ರಿಯಲ್ಲಿ ನಿರ್ವಹಣೆ ಮಾಡುವ ಕುರಿತು ಹಣಕಾಸು ಅಧಿಕಾರಿಗಳು ಮಾತನಾಡಿ 2019–20ನೇ ಹಣಕಾಸು ವರ್ಷ ಈಗಾಗಲೇ ಪ್ರಾರಂಭವಾಗಿರುವುದರಿಂದ ಮುಂದಿನ ಹಣಕಾಸು ವರ್ಷದಿಂದ ಡಬಲ್ ಎಂಟ್ರಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುವುದೆಂದು ತಿಳಿಸಿದರು. ಸದಸ್ಯರು ಇದಕ್ಕೆ ಒಪ್ಪಿಗೆ ನೀಡಿದರು.

3. ಲೆಕ್ಕ ಪರಿಶೋಧಕರ ತಪಾಸಣಾ ವರದಿ ಮತ್ತು ಅವಲೋಕನಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಶೀಲಿಸಿ ಇವುಗಳಿಗೆ ವಾಸ್ತವಾಂಶಗಳನ್ನೊಳಗೊಂಡ ಉತ್ತರಗಳನ್ನು ನೀಡಿ ಆಡಿಟ್ ಪ್ಯಾರಗಳನ್ನು ಕೈಬಿಡುವಂತೆ ಲೆಕ್ಕ ಪರಿಶೋಧಕರನ್ನು ಮನವೊಲಿಸಲು ಅಧಿಕಾರ ವರ್ಗಕ್ಕೆ ಸೂಚಿಸಲಾಯಿತು. ಸೆಕ್ಷನ್–ಎ ಅಡಿ ಕಂಡಿಕೆ II ರ "Procurement of Additional Land for Construction of KSRDPR University at Gadag – Avoidable extra expenditure of Rs. 21.69 Crores" ಕುರಿತು ಕಾರ್ಯನಿರ್ವಾಹಕ ಪರಿಷತ್ತು ಪ್ರಸ್ತಾಪಿಸಿ, ವಿಶ್ವವಿದ್ಯಾಲಯದ ಸ್ಥಾಪನೆಯ ಪೂರ್ವದಲ್ಲಿ ರಾಜ್ಯ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯ ಈ ಉದ್ದೇಶಕ್ಕಾಗಿ 500 ಎಕರೆ ಜಮೀನಿನ ಅಗತ್ಯವಿದೆ ಎಂಬ ಶಿಫಾರಸ್ಸನ್ನು ಆಧರಿಸಿ ಅಂತಿಮವಾಗಿ ಸುಮಾರು 353 ಎಕರೆಯನ್ನು ನೀಡಿರುವುದು ರಾಜ್ಯ ಸರ್ಕಾರದ ನಿರ್ಧಾರವಾಗಿದೆ. ವಿಶ್ವವಿದ್ಯಾಲಯದ ಮುಂದಿನ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಇದು ಅಗತ್ಯವೂ ಕೂಡ ಆಗಿದೆ ಎಂದು ಅಭಿಪ್ರಾಯ ಪಡಲಾಯಿತು.

ಮೇಲಿನ ಚರ್ಚೆಯೊಂದಿಗೆ ದಿನಾಂಕ 30–11–2019 ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಹಾಗೂ 2020–21ನೇ ಸಾಲಿನ ಹಣಕಾಸು ಅಂದಾಜುಗಳನ್ನು (ಆಯವ್ಯಯ), ಹಾಗು ಇತರ ನಿರ್ಣಯಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

ಅನುಮೋದನೆಗೊಂಡ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 28(14)ರನ್ವಯ ಅನುಮೋದನೆಗೊಂಡ ಹಣಕಾಸು ಅಂದಾಜುಗಳಲ್ಲಿ ತಪ್ಪು-ಒಪ್ಪುಗಳೇನಾದರೂ ಇದ್ದಲ್ಲಿ ಸರಿಪಡಿಸಲು ಕುಲಪತಿಗಳಿಗೆ ಅಧಿಕಾರ ನೀಡಿ ಶೈಕ್ಷಣಿಕ ಪರಿಷತ್ತಿನ ಮುಂದೆ ಮಂಡಿಸಲು ನಿರ್ಣಯಿಸಲಾಯಿತು.

**RESOLUTION**

The Chairman briefed the Executive Council the decisions taken in the third meeting of the Finance Committee held on 30-11-2019 on the following subjects. The Executive Council had detailed discussions on the decisions taken at the Finance Committee regarding the Financial Estimates (Budget) for the year 2020-2021, Double/Single entry system of cash book, audit reports etc.

1. Speaking on the budget estimates with regard to construction of buildings in the new Campus, Dr. Prakash Bhat observed that the rate per sq. ft. for Statutory Officers Quarters as indicated in the Table (ಅನುಬಂಧ-1(ಅ)) appears to be on higher side compared to other buildings like Vice Chancellor's residence, Registrar's residence and other buildings. The Executive Engineer was asked to verify, cross-check these figures and rectify the same in case of errors. After verifying the documents, the area, rate per Sq. Ft. etc., have been corrected. The corrected statement is attached to the Proceedings.

2. As regards Double/Single entry in cash books, the Finance Officer informed that as the financial year 2019-20 has already begun, the double entry system will be adopted from the next financial year. The members agreed to this.

3. Regarding Inspection Report of the Audit team and their observations, the members asked the administration to furnish approriate replies with relevant facts and convince the audit officers to drop the paras wherever possible. With regard to audit para II under Section-A pertaining to "Procurement of additional land for construction of KSRDPR University at Gadag – Avoidable extra expenditure of Rs. 21.69 crores", the Executive Council was of the

opinion that the extent of land required for establishment of the University was the decision of the State Government based on the recommendations of the Expert Committee constituted for the purpose, wherein it had recommended for allotment of 500 acres, whereas the Government has decided to allot around 353 acres and it is very much essential for allround development of the University.

With the above deliberations, the Executive Council resolved to approve the Proceedings of the Finance Committee dated 30-11-2019 along with the Financial Estimates (Budget) for the year 2020-2021. The Budget estimates as approved by the Executive Council are given in Annexure-A. It was further resolved to authorize the Vice Chancellor to make corrections, if any, and submit the same to the Academic Council as required under Section 28(14) of the KSRDPR University Act, 2016.

**ವಿಷಯ ಸಂಖ್ಯೆ 2: ದಿನಾಂಕ 19 ನವೆಂಬರ್ 2019 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದನೆ ಬಗ್ಗೆ**

**Subject No. 2: To consider and approve the Proceedings of the Purchase Committee meeting held on 19th November 2019.**

**ಪರಾಮರ್ಷಿತ ಟಿಪ್ಪಣಿ:**

ದಿನಾಂಕ 19 ನವೆಂಬರ್ 2019 ರಂದು ಬೆಳಗ್ಗೆ 11–00 ಗಂಟೆಗೆ ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ.

**Reference Note:**

The Proceedings of the Purchase Committee meeting held on 19th November 2019, in KSRDPR University, Gadag are placed before the Executive Council for kind consideration and approval. A Copy of the Proceedings is attached herewith.

**ನಿರ್ಣಯ**

ಅಧ್ಯಕ್ಷರು ದಿನಾಂಕ 19 ನವೆಂಬರ್ 2019 ರಂದು ಬೆಳಗ್ಗೆ 11–00 ಗಂಟೆಗೆ ಜರುಗಿದ ಖರೀದಿ ಸಮಿತಿ ಸಭೆಯು ಈ ಕೆಳಕಂಡ ವಿಷಯಗಳ ಬಗ್ಗೆ, ಅಂದರೆ –

(1) ಇಲೆಕ್ಟ್ರಾನಿಕ್ಸ್ ಉಪಕರಣಗಳ (ಡೆಸ್ಕಟಾಪ್ ಕಂಪ್ಯೂಟರ್ಸ್, ಲ್ಯಾಪಟಾಪ್ಸ್, ಪ್ರೊಜೆಕ್ಟರ್ಸ, ವೀಡಿಯೋ ಕಾನ್ಫರೆನ್ಸ್ ಸಿಸ್ಟಮ್ಸ್, ಸ್ಮಾರ್ಟ ಕ್ಲಾಸ ರೂಮ್ಸ್, ಡಿಜಿಟಲ್ ಪೋಡಿಯಮ್, ಡೀಜೆಲ್ ಜನರೇಟರ್ ಸೆಟ್, ಡಿಜಿಟಲ್ ಲೈಬ್ರರಿ ಸಿಸ್ಟಮ್ಸ್, ಮುಂತಾದವುಗಳ ಪೂರೈಕೆ – (ಅಂದಾಜು ವೆಚ್ಚ ರೂ. 1,38,40,000/–);

(2) ವಿಶ್ವವಿದ್ಯಾಲಯ ಹಾಗೂ ತರಬೇತಿ ಕೇಂದ್ರಕ್ಕೆ ಬೇಕಾಗುವ ಪೀಠೋಪಕರಣಗಳ (ಅಲ್ಮೇರಾ, ಪ್ಲಾಸ್ಟಿಕ್ ಚೇರ್ಸ್, ಟೇಬಲ್ಸ್, ಸ್ಟಡಿ ಟೇಬಲ್ಸ್, ಕಪ್‌ಬೋರ್ಡ್ಸ್, ಕಾಟ್ಸ್, ಬೆಡ್ಸ್, ಪೋಡಿಯಮ್ ಮುಂತಾದವುಗಳು ಪೂರೈಕೆ – (ಅಂದಾಜು ವೆಚ್ಚ ರೂ. 46,85,000/–);

(3) ಗ್ರಂಥಾಲಯದ ಪಿಠೋಪಕರಣಗಳ (Single/ Double Faced Book racks, Racks for Journals and Magazines, Students Reading Tables, Students Reading Chairs (Peacock), News paper stands, Book End, Book Trolley, Circulation Counter/ Librarian Cabin, Baggage Counter, Name Boards, Two step Chair, Digital Notice Board, Racks etc, ಪೂರೈಕೆ – (ಅಂದಾಜು ವೆಚ್ಚ ರೂ. 31,03,000/–);

(4) ಕ್ರೀಡಾ ಸಾಮಗ್ರಿಗಳು ಹಾಗೂ ಜಿಮ್ ಸಲಕರಣೆಗಳ ಪೂರೈಕೆ – (ಅಂದಾಜು ವೆಚ್ಚ ರೂ. 11,05,000/–); ಹಾಗೂ

(5) ವಿಶ್ವವಿದ್ಯಾಲಯದ ವಿವಿಧ ಕೋರ್ಸ‌ಗಳಿಗೆ/ವಿಭಾಗಗಳಿಗೆ ಬೇಕಾಗುವ ಅಗತ್ಯ ಸಾಫ್ಟ್‌ವೇರಗಳ ಪೂರೈಕೆ, –

ಇವುಗಳ ಬಗ್ಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತು ವಿವರಗಳನ್ನು ಪರಿಶೀಲಿಸಿ ಖರೀದಿ ಸಮಿತಿಯ ತೀರ್ಮಾನಗಳನ್ನು ಅನುಮೋದಿಸಲು ನಿರ್ಣಯಿಸಿತು.

**RESOLUTION**

The Chairman briefed the Executive Council the decisions of the Purchase Committee dated 18-11-2019 on –

(1) Procurement of equipment (Desktop Computers, Laotps, Projects, Video Conference systems, Smart Clssrooms, Digital Podium, Diesel Generator Set, Digital Library systems etc) – (approximate cost, Rs. 1,38,40,000/–); ;

(2) Procurement of Furniture for Training Centre (Almirah, Plastic Chairs, Tables, Study Tables, Cupboards, Cots, Beds, Podium etc.) - (approximate cost, Rs. 46,85,000/–);

(3) Procureent of Furniture for Library (Single/ Double Faced Book racks, Racks for Journals and Magazines, Students Reading Tables, Students Reading Chairs (Peacock), News paper stands, Book End, Book Trolley, Circulation Counter/ Librarian Cabin, Baggage Counter, Name Boards, Two step Chair, Digital Notice Board, Racks etc, - (approximate cost, Rs. 31,03,000/–);

(4) Procurement of Sports and Gym equipment - (approximate cost, Rs. 11,05,000/–); and

(5) Procurement of required softwares for different courses/ departments of the University.

The Executive Council examined the purchase proposals and the decisions of the Purchase Committee and resolved to approve the same.

ವಿಷಯ ಸಂಖ್ಯೆ 3: 06-12-2019 ರಂದು ಆಯೋಜಿಸಿರುವ ಕಾಮಗಾರಿ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದನೆ ಬಗ್ಗೆ

**Subject No. 3: To consider and approve the Proceedings of the Works Committee meeting scheduled on 6th December 2019.**

**ಪರಾಮರ್ಷಿತ ಟಿಪ್ಪಣಿ:**

ಕೆಲವು ತುರ್ತು ವಿಷಯಗಳನ್ನು ಪರಿಗಣಿಸಲು ದಿನಾಂಕ 06-12-2019 ರಂದು ಆಯೋಜಿಸಿರುವ ಕಾಮಗಾರಿ ಸಮಿತಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗುವುದು. ಕಾಮಗಾರಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯ ಸಮಯದಲ್ಲಿ ಒದಗಿಸಲಾಗುವುದು.

**Reference Note:**

A meeting of the Works Committee to consider certain urgent matters is scheduled on 6th December 2019 in KSRDPR University, Gadag. The Proceedings of the said meeting will be placed before the Executive Council (on table) for kind consideration and approval.

**ನಿರ್ಣಯ**

ದಿನಾಂಕ 06-12-2019 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯು ಈ ಕೆಳಕಂಡ ವಿಷಯಗಳ ಬಗ್ಗೆ ತೆಗೆದುಕೊಂಡಿರುವ ತೀರ್ಮಾನಗಳ ಬಗ್ಗೆ ಅಧ್ಯಕ್ಷರು ಸಭೆಗೆ ವಿವರಿಸಿದರು:

(1) To consider and approve the bids for the work "Construction of Replica of Sabarmati Ashram in KSRDPR University Campus (balance work);

(2) To award Non-SR items of the work "Construction of School Building - SB1, Boys Hostel Block-I and Dining Block in the KSRDPR University Campus" to the successful tenderer as per the Clause 35.3 of Section 5 of Bid Document KW-4, without calling for an additional tender".

(3) To consider and approve the increase in quantities of items considered in BOQ of the work of "Construction of School Building-SB1, Boys Hostel Block-1, Dining Block-1 in KSRDPR University Campus, Gadag".

(4) To consider and approve the Increase in quantities of items considered in BOQ of the work of "Construction of Training Center Building in KSRDPR University Campus, Gadag".

1) ವಿಷಯ ಸಂಖ್ಯೆ-1 ರ ಬಗ್ಗೆ ಸಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡದ ಬಾಕಿ ಇರುವ ಕಾಮಗಾರಿಗಳನ್ನು ಪೂರೈಸಲು ಟೆಂಡರ್ ಮೊತ್ತಕ್ಕಿಂತ ಶೇ 1.599 ರಷ್ಟು ನಮೂದಿಸಿ ಟೆಂಡರ್ ಪಡೆದಿರುವ ಶ್ರೀ ವಿ. ಬಿ. ಕಳಸಣ್ಣವರ ಅವರನ್ನು ಸಭೆಗೆ ಆಹ್ವಾನಿಸಿ, ಕಾಮಗಾರಿಯನ್ನು ಮೂಲ ಸಬರಮತಿ ಆಶ್ರಮದ

ಸೌಂದರ್ಯಕ್ಕೆ ಭಂಗ ಬರದಂತೆ ನಿಗಧಿತ ಸಮಯದಲ್ಲಿ ಪೂರೈಸಬೇಕೆದು ಸೂಚನೆ ನೀಡಲಾಯಿತು. ಕಟ್ಟಡದ ವೈಶಿಷ್ಟ್ಯಗಳ ಬಗ್ಗೆ ಪ್ರತ್ಯಕ್ಷ ವೀಕ್ಷಿಸಿ ಪೂರ್ಣ ಮಾಹಿತಿ ಪಡೆಯಲು ಗುಜರಾತನಲ್ಲಿರುವ ಮೂಲ ಸಬರಮತಿ ಆಶ್ರಮಕ್ಕೆ ವಿಶ್ವವಿದ್ಯಾಲಯದ ಅಭಿಯಂತರೊಡಗೂಡಿ ಭೇಟಿ ನೀಡಲು ಅವರಿಗೆ ಸೂಚಿಸಲಾಯಿತು.

2) ವಿಷಯ ಸಂಖ್ಯೆ–2 ರಲ್ಲಿರುವ ಶಾಲಾ ಕಟ್ಟಡ, ಬಾಲಕರ ವಸತಿನಿಲಯ ಬ್ಲಾಕ್–1, ಭೋಜನ ಗೃಹ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆ ಪಡೆದಿರುವ ಮೆ: ಎಸ್.ಆರ್. ಕನ್ಸಟ್ರಕ್ಷನ್ ಕಂಪನಿಯವರಿಗೆ ಎಸ್.ಆರ್.ನಲ್ಲಿ ಇರದ ಕಾಮಗಾರಿಗಳನ್ನು ಟೆಂಡರ್ ಪ್ರೀಮಿಯಮ್ ಸೇರಿ ಬಿಡ್ ಡಾಕ್ಯುಮೆಂಟ್ KW-4, ಸೆಕ್ಷನ್–5, ಕಂಡಿಕೆ 35.3 ರ ಪ್ರಕಾರ ಹೊಸದಾಗಿ ಒಪ್ಪಂದ ಮಾಡಿಕೊಂಡು ವಹಿಸುವ ಬಗ್ಗೆ ಕಾಮಗಾರಿ ಸಮಿತಿಯ ನಿರ್ಣಯವನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

3) ವಿಷಯ ಸಂಖ್ಯೆ–3ಕ್ಕೆ ಸಂಬಂಧಿಸಿದಂತೆ, ಶಾಲಾ ಕಟ್ಟಡ ಎಸ್‌ಬಿ–1, ಬಾಲಕರ ವಸತಿನಿಲಯ ಬ್ಲಾಕ್–1, ಭೋಜನ ಗೃಹ ಬ್ಲಾಕ್–1, ಇವುಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಾದ ಶ್ರೀ ಸುಬ್ಬಾರೆಡ್ಡಿಯವರ ಪತ್ರ ದಿನಾಂಕ 15/06/2019 ರಲ್ಲಿ ನೀಡಿರುವ ಕಾರಣಗಳಿಂದಾಗಿ ಕೆಲವು ಕಾಮಗಾರಿಗಳಲ್ಲಿ ಹೆಚ್ಚಾಗಿರುವ ಪ್ರರಿಮಾಣಗಳನ್ನು ಅನುಮೋದನೆ ಮಾಡಿರುವ ಕಾಮಗಾರಿ ಸಮಿತಿಯ ನಿರ್ಣಯವನ್ನು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

4) ವಿಷಯ ಸಂಖ್ಯೆ–4 ರಲ್ಲಿ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣದಲ್ಲಿ ಅಂಶಗಳ ಹೆಚ್ಚಳಕ್ಕೆ ಪ್ರಮುಖವಾಗಿ Site Condition ಮತ್ತು Proof Checking ನಂತರ Design and Drawings ಗಳಲ್ಲಿ ಕೆಲವು ಬದಲಾವಣೆಗಳಾಗಿರುವ ಕಾರಣವನ್ನು ಪರಿಗಣಿಸಿ ಸದರಿ ಹೆಚ್ಚುವರಿ ಅಂಶಗಳನ್ನು ಅನುಮೋದಿಸಿರುವ ಕಾಮಗಾರಿ ಸಮಿತಿಯ ತೀರ್ಮಾನವನ್ನು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

**RESOLUTION:**

The Chairman briefed the Executive Council the decisions of the Works Committee on each of the following agenda:

(1) To consider and approve the bids for the work "Construction of Replica of Sabarmati Ashram in KSRDPR University Campus (balance work);

(2) To award Non-SR items of the work "Construction of School Building - SB1, Boys Hostel Block-I and Dining Block in the KSRDPR University Campus" to the successful tenderer as per the Clause 35.3 of Section 5 of Bid Document KW-4, without calling for an additional tender".

(3) To consider and approve the increase in quantities of items considered in BOQ of the work of "Construction of School

Building-SB1, Boys Hostel Block-1, Dining Block-1 in KSRDPR University Campus, Gadag".

(4) To consider and approve the Increase in quantities of items considered in BOQ of the work of "Construction of Training Center Building in KSRDPR University Campus, Gadag".

Regarding Subject No.1, the Executive Council invited the Contractor Shri V.B. Kalasannavar, to whom the tender has been awarded (he has quoted 1.599% above the tendered amount of Rs. 64,31,350/-), for construction of replica of Sabarmati Ashram (balance work) and he was asked to executive and complete the work within the stipulated time keeping in view the asthetics of original Sabarmati Ashram. He was also asked to visit the Sabarmati Ashram in Gujarat along with the University Executive Engineer to have the first hand information about the unique features of the building.

As regards, Subject No.2, the Executive Council resolved to approve the recommendation of the Works Committee to award non-SR items of the work of construction of School Building - SB1, Boys Hostel Block-I and Dining Block, to M/s. S.R. Construction Company as per original SR rates including Tender Premium as indicated in Bid Document KW-4, Section 5, Clause 35.3 by making fresh agreement for additional works.

Regarding Subject No.3, the Executive Council resolved to approve the recommendations of the Works Committee to approve the increase in quantities of some items of the work of Construction of School Building-SB1, Boys Hostel Block-1, Dining Block-1, for the reasons stated in the letter dated 15/06/2019 of the Contracor Sri Subba Reddy.

Regarding Subject No.4, the Executive Council resolved to approve the recommendations of the Works Committee to approve the increase in quantities of some items of the work of "Construction of Training Center Building in KSRDPR University Campus, Gadag".

With these discussions, the Executive Council resolved to approve the Proceedings of the Works Committee meeting held on 6th December, 2019.

## ಟೇಬಲ್ ಅಜೆಂಡಾ

**ವಿಷಯ ಸಂಖ್ಯೆ 1: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದ ವಿಶೇಷ ಕಾಂಪೋನೆಂಟ್ ಯೋಜನೆಯಡಿ (ಎಸ್.ಸಿ.ಪಿ./ಡಿಎಸ್.ಪಿ) ಅನುದಾನ ಪಡೆದು ಸೌಲಭ್ಯಗಳನ್ನು ಒದಗಿಸುವ ಬಗ್ಗೆ**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2017–18ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಥಮ ಮತ್ತು ದ್ವಿತೀಯ ವರ್ಷಗಳಲ್ಲಿ ಪ್ರವೇಶ ಪಡೆದಿದ್ದ ಸುಮಾರು 305 ವಿದ್ಯಾರ್ಥಿಗಳಲ್ಲಿ 56 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಯ ಮತ್ತು 21 ವಿದ್ಯಾರ್ಥಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರು. ಮೂರನೇ ವರ್ಷದಲ್ಲಿ ಪ್ರವೇಶ ಪಡೆದವರನ್ನು ಸೇರಿಸಿದರೆ ಸುಮಾರು 94 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದರವರಾಗಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಾಗಿದ್ದು ಇವರು ತಮ್ಮ ವ್ಯಾಸಂಗವನ್ನು ಅರ್ಥಪೂರ್ಣವಾಗಿ ಮುಂದುವರೆಸಲು ಹಲವಾರು ಸವಲತ್ತುಗಳನ್ನು ಒದಗಿಸಬೇಕಾಗಿದೆ. ಇವುಗಳಲ್ಲಿ ಪ್ರಮುಖವಾಗಿ ಊಟ ಮತ್ತು ವಸತಿ ವ್ಯವಸ್ಥೆ– ಪ್ರತ್ಯೇಕ ಪುರುಷ ಮತ್ತು ಮಹಿಳಾ ಹಾಸ್ಟೆಲ್‌ಗಳು ಅವಶ್ಯಕವಾಗಿರುತ್ತವೆ. ಅಲ್ಲದೇ ಬಹುತೇಕ ವಿದ್ಯಾರ್ಥಿಗಳು ಪದವಿ ಮಟ್ಟದವರೆಗೂ ಕನ್ನಡದ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಾಗಿದ್ದು, ಇವರಗಳನ್ನು ಈಗಿನ ಜಾಗತಿಕ ಮಟ್ಟದದಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವಂತೆ ತಯಾರು ಮಾಡಲು ವಿಶೇಷವಾಗಿ ಆಂಗ್ಲ ಭಾಷೆಯ ಸಂವಹನ ತರಬೇತಿ, ವ್ಯಕ್ತಿತ್ವ ವಿಕಸನ ಅಭಿವೃದ್ಧಿ ಹಾಗೂ ಕಂಪ್ಯೂಟರ್ ಕೌಶಲ್ಯ ತರಗತಿಗಳನ್ನು ನಡೆಸಬೇಕಾಗುತ್ತದೆ ಜೊತೆಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ನೀಡಬೇಕಾಗಬಹುದಾಗಿದೆ.

ಈ ಎಲ್ಲಾ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒದಗಿಸಲು ಹಿಂದಿನ ಹಣಕಾಸು ವರ್ಷಗಳಲ್ಲಿ ಖಅಕ/ಖಿಖಕ ವಿಶೇಷ ಯೋಜನೆಯಡಿಯಲ್ಲಿ ಸುಮಾರು 19.60 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುದಾನವನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. (ದಿನಾಂಕ 09-01-2018 ಮತ್ತು 26–12–2018) (ಕ್ರಿಯಾ ಯೋಜನೆಯ ಪ್ರತಿಯನ್ನು ಲಗತ್ತಿಸಲಾಗಿದೆ.)

ಇದಕ್ಕೆ ಉತ್ತರವಾಗಿ ದಿನಾಂಕ 18-11-2019ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಪತ್ರ ಬರೆದು, 2019–20ನೇ ಸಾಲಿನಲ್ಲಿ ನಮ್ಮ ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆ 2515–00–102–0–13–103 ರಡಿ ಹಂಚಿಕೆ ಮಾಡಲಾಗಿರುವ ರೂ.1587.00 ಲಕ್ಷಗಳ ಮಿತಿಯೊಳಗೆ ವಿಶ್ವವಿದ್ಯಾಲಯದ ಇತರೆ ಕಾರ್ಯಚಟುವಟಿಕೆಗಳಿಗೆ ಸಾಮಾನ್ಯ ವರ್ಗದ ಕಾರ್ಯಕ್ರಮವು ಸೇರಿದಂತೆ (ಎಸ್.ಸಿ.ಪಿ/ಟಿ.ಎಸ್.ಪಿ) ಯೋಜನೆಗಳಿಗೆ ಒದಗಿಸಲಾಗಿರುವ ಅನುದಾನದ ಮಿತಿಯೊಳಗೆ ಅಗತ್ಯ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ತಿಳಿಸಿರುತ್ತಾರೆ.

ಇದಕ್ಕೆ ಉತ್ತರವಾಗಿ ದಿನಾಂಕ 30–11–2019 ರಂದು ಪತ್ರ ಬರೆದು ಇಲ್ಲಿಯವರೆಗೂ ವಿಶ್ವವಿದ್ಯಾಲಯಕ್ಕೆ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಿಗೆ ಪ್ರತ್ಯೇಕ ಅನುದಾನ ಒದಗಿಸಿರುವುದಿಲ್ಲ. ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಮಂಜೂರು ಮಾಡಲಾಗುವಂತೆ ನಮ್ಮ ವಿಶ್ವವಿದ್ಯಾಲಯಕ್ಕೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಪ್ರತ್ಯೇಕ ಅನುದಾನ ಮಂಜೂರು ಮಾಡುವವರೆಗೂ, ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆ: 2515–00–102–0–13–103 ರಡಿ ಹಂಚಿಕೆ ಮಾಡಿರುವ ರೂ.1587.00 ಲಕ್ಷಗಳ ಮಿತಿಯೊಳಗೆ ವಿಶ್ವವಿದ್ಯಾಲಯದ ಇತರೆ ಕಾರ್ಯಚಟುವಟಿಕೆಗಳಿಗೆ ಸಾಮಾನ್ಯ ವರ್ಗದ ಕಾರ್ಯಕ್ರಮಗಳೂ ಸೇರಿದಂತೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಸದರಿ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ನಿಯಮಾನುಸಾರ ಮಿತಿಗೊಳ್ಳಪಟ್ಟು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಉಪಯೋಗಕ್ಕಾಗಿ ಹಾಗೂ ವಿದ್ಯಾರ್ಥಿಗಳ ಬೇಡಿಕೆಗಳನುಸಾರ 94 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ, ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸಲು, ವಿಶೇಷ ತರಬೇತಿಗಳನ್ನು (ಆಂಗ್ಲ ಸಂವಹನ ಕೌಶಲ್ಯ ತರಗತಿ, ವ್ಯಕ್ತಿತ್ವ ವಿಕಸನ ತರಗತಿ, ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ಇತ್ಯಾದಿಗಳನ್ನು) ಆಯೋಜಿಸಲು ಹಾಗೂ ಪುಸ್ತಕಗಳನ್ನು ಖರೀದಿಸಲು

ಅಂದಾಜು ಮೊತ್ತ ರೂ. 1.10 ಕೋಟಿಗಳ (ರೂ. ಒಂದು ಕೋಟಿ ಹತ್ತು ಲಕ್ಷಗಳು) ಮೊತ್ತದ ಅಗತ್ಯ ಅನುದಾನ ಬಳಕೆ ಮಾಡಿಕೊಳ್ಳಲು ಅನುಮೋದನೆ ನೀಡಬೇಕೆಂದು ಸರ್ಕಾರವನ್ನು ಕೋರಲಾಗಿದೆ.

ಈ ಹಿನ್ನೆಲೆಯಲ್ಲಿ, ಮೇಲೆ ತಿಳಿಸಿರುವ ಪ್ರಸ್ತಾವನೆಯನ್ನು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಾಮಾನ್ಯ ವೆಚ್ಚಗಳಿಗೆ 2019-20ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 2515-00-102-0-13-103 ರಡಿ ಹಂಚಿಕೆ ಮಾಡಿರುವ ರೂ.1587.00 ಲಕ್ಷಗಳ ಮಿತಿಯಲ್ಲಿ ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಉದ್ದೇಶಗಳಿಗೆ ಅಂದಾಜು ಮೊತ್ತ ರೂ. 1.10 ಕೋಟಿಗಳನ್ನು ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಬಳಕೆ ಮಾಡಿಕೊಳ್ಳಲು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ವಿಷಯದ ಬಗ್ಗೆ ಡಾ. ಕೆ. ಎಂ. ಹನುಮಂತರಾಯಪ್ಪ ಅವರು ಮಾತನಾಡಿ ಪ್ರವರ್ಗ-I ಕ್ಕೆ ಸೇರಿದ ವಿದ್ಯಾರ್ಥಿಗಳೂ ಸಹ ಬಹಳ ಹಿಂದುಳಿದವರಾಗಿರುವುದರಿಂದ ಸದರಿ ಸೌಲಭ್ಯಗಳನ್ನು ಅವಕಾಶವಿದ್ದರೆ ಅವರಿಗೂ ವಿಸ್ತರಿಸಬಹುದು ಎಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ವಿಶೇಷ ಕಾಂಪೊನೆಂಟ್ ಯೋಜನೆಗಳು ಪರಿಶಿಷ್ಟ ಜಾತಿ / ಪಂಗಡದವರಿಗೆ ಮಾತ್ರ ಅನ್ವಯಿಸುತ್ತದೆ ಎಂದು ಸಭೆಗೆ ತಿಳಿಸಲಾಯಿತು. ಶ್ರೀ ಅಬ್ದುಲ್ ಹಕೀಮ್ ಅವರು ಮಾತನಾಡಿ, ಈಗಿನ ಪರಿಸ್ಥಿತಿಯಲ್ಲಿ ಈ ಉದ್ದೇಶಕ್ಕಾಗಿ ಸರ್ಕಾರ ಪ್ರತ್ಯೇಕ ಅನುದಾನ ಮಂಜೂರು ಮಾಡುವ ಸಾಧ್ಯತೆ ಇಲ್ಲ ಎಂದು ತಿಳಿಸಿದರು.

ಚರ್ಚೆಯ ನಂತರ, ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಸಾಮಾನ್ಯ ವೆಚ್ಚಗಳ ಲೆಕ್ಕ ಶೀರ್ಷಿಕೆ 2515-00-102-0-13-103 ಅಡಿ ಲಭ್ಯವಿರುವ ಅನುದಾನದಲ್ಲಿ ಎಸ್.ಸಿ.ಪಿ./ ಟಿ.ಎಸ್.ಪಿ ಯೋಜನೆಗಳಿಗೆ ವೆಚ್ಚ ಮಾಡಲು ಕಾಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

Speaking on the subject, Dr. K.M. Hanumantharayappa said, if rules provide for, similar facilities may also be extended to the students belonging to Category-I, as they are also socially very backward. It was informed that Special Component grant is applicable only to SC/ST students. Shri Abdul Hakim said that in the present situation, the State Government may not sanction separate grants for this purpose.

After discussion, the Executive Council resolved to approve the proposal to spend the required amount for SCP/TSP out of the fund available under Head of Account: 2515-00-102-0-13-103 sanctioned for General Expenses, anticipating/awaiting the approval of the State Government.

**ವಿಷಯ ಸಂಖ್ಯೆ 2: ವಿಶ್ವವಿದ್ಯಾಲಯಕ್ಕೆ ಖರೀದಿಸಲಾದ ಶ್ರೀ ರಾಮಪ್ಪ ತಿಮ್ಮಪ್ಪ ಪೂಜಾರ ಇವರ ಗದಗ ತಾಲೂಕ ನಾಗಾವಿ ಗ್ರಾಮದ ರಿ. ಸ. ನಂ. 144/3 ಕ್ಷೇತ್ರ 01ಎ-06ಗು ಜಮೀನಿನಲ್ಲಿ ಕೊಳವೆ ಬಾವಿ ಮತ್ತು ಪೈಪಲೈನಗೆ ಪರಿಹಾರ ನೀಡುವ ಕುರಿತು.**

**ಪರಾಮರ್ಶನ ಟಿಪ್ಪಣಿ :**

ಗದಗ ತಾಲೂಕ ನಾಗಾವಿ ಗ್ರಾಮದ ರಿ. ಸ. ನಂ. 144/3 ಕ್ಷೇತ್ರ 01ಎ–06ಗು ಜಮೀನನ್ನು ಶ್ರೀ ರಾಮಪ್ಪ ತಿಮ್ಮಪ್ಪ ಪೂಜಾರ ಸಾ॥ ನಾಗಾವಿ ಇವರಿಂದ ದಿನಾಂಕ: 15/04/2016 ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸ್ಥಾಪನೆಗೆ ಖರೀದಿ ಮಾಡಲಾಗಿತ್ತು. ಖರೀದಿ ಸಮಯದಲ್ಲಿ ಜಮೀನಿಗೆ ಮಾತ್ರ ಮೌಲ್ಯ ನಿರ್ಧರಿಸಿದ್ದು, ಸದರಿ ಜಮೀನಿನಲ್ಲಿರುವ ಕೊಳವೆ ಬಾವಿ ಮತ್ತು ಪೈಪಲೈನ್‌ಗೆ ಮೊತ್ತ ಪಾತಿಯಾಗಿಲ್ಲವೆಂದು, ಇದರ ಪರಿಹಾರ ನೀಡಬೇಕೆಂದು ಕೋರಿ ಶ್ರೀ ರಾಮಪ್ಪ ತಿಮ್ಮಪ್ಪ ಪೂಜಾರ ಇವರು ವಿಶ್ವವಿದ್ಯಾಲಯಕ್ಕೆ ವಿನಂತಿಸಿಕೊಂಡಿರುತ್ತಾರೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಸದರಿ ಜಮೀನಿನಲ್ಲಿರುವ ಕೊಳವೆ ಬಾವಿ ಹಾಗೂ ಪೈಪಲೈನ್‌ನ ಸ್ಥಳ ಪರೀಶಿಲನೆ ಮಾಡಿ 2.25 ಲಕ್ಷ ಮೊತ್ತಕ್ಕೆ ಅಂದಾಜು ಪತ್ರಿಕೆಯನ್ನು ಸಲ್ಲಿಸಿರುತ್ತಾರೆಂದು ತಹಶೀಲ್ದಾರರು, ಗದಗ ಇವರು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿರುತ್ತಾರೆ. ದಿನಾಂಕ: 20/04/2018 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರಿಗೆ ಸದರಿ ಪರಿಹಾರ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಿಂದ ಪತ್ರವನ್ನು ಸಲ್ಲಿಸಲಾಗಿದೆ.

ಈ ಹಿಂದೆ, ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ದಿನಾಂಕ 30–04–2016 ರಂದು ಖರೀದಿಸಲಾದ ಶ್ರೀ ಹಸನಸಾಬ ಫಕೀರಸಾಬ ಫೀರಖಾನವರ ಇವರ ಗದಗ ತಾಲೂಕಿನ ನಾಗಾವಿ ಗ್ರಾಮದ ರಿ. ಸ. ನಂ 149/3 ಕ್ಷೇತ್ರ 1ಎ–28ಗು ಜಮೀನಿನಲ್ಲಿದ 32 ಸಾಗವಾನಿ ಗಿಡಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ಇವರು ರೂ:13,804/– ಮೊತ್ತಕ್ಕೆ ಮೌಲ್ಯಮಾಪನ ವರದಿಯನ್ನು ನೀಡಿರುತ್ತಾರೆ. ಮತ್ತು ಸದರಿ ಜಮೀನಿನಲ್ಲಿದ ಕೊಳವೆ ಬಾವಿಗೆ ವಿಶ್ವವಿದ್ಯಾಲಯದ ತಾಂತ್ರಿಕ ಸಿಬ್ಬಂದಿಯವರು ಸ್ಥಳ ಪರಿಶೀಲನೆ ಮಾಡಿ, 2012–13 ನೇ ಸಾಲಿನ ಗ್ರಾ.ಕು.ನೀ ಮತ್ತು ನೈ ಇಲಾಖೆ, ಬೆಳಗಾವಿ ವೃತ್ತದ ದರ ಪಟ್ಟಿಯಂತೆ ರೂ:43,950/– ಮೊತ್ತಕ್ಕೆ ಅಂದಾಜು ಪತ್ರಿಕೆಯನ್ನು ತಯಾರಿಸಿರುತ್ತಾರೆ. ಅದರಂತೆ 32 ಸಾಗವಾನಿ ಗಿಡಗಳು ಮತ್ತು ಒಂದು ಕೊಳವೆ ಬಾವಿಗೆ ಒಟ್ಟು ರೂ. 57,754=00 ಮೊತ್ತಕ್ಕೆ, ಅಂದಿನ ಮಾನ್ಯ ಕುಲಪತಿಗಳು ಅನುಮೋದಿಸಿದನ್ವಯ ಪರಿಹಾರ ನೀಡಲಾಗಿರುತ್ತದೆ.

ಮುಂದುವರೆದು, ಶ್ರೀ ರಾಮಪ್ಪ ತಿಮ್ಮಪ್ಪ ಪೂಜಾರ ಇವರ ಜಮೀನಿನಲ್ಲಿ ಅಳವಡಿಸಲಾದ ಪೈಪ್‌ಲೈನ್ ಮತ್ತು Submercible Pump ತುಂಬಾ ಹಳೆಯದಾಗಿದ್ದು, ಅವುಗಳನ್ನು ಉಪಯೋಗಿಸಲು ಯೋಗ್ಯವಿಲ್ಲದಿರುವುದು ಕಂಡುಬಂದಿರುತ್ತದೆ. ಆದರೆ, ಸದರಿ ಜಮೀನಿನಲ್ಲಿ ಕೊರೆಯಲಾದ ಕೊಳವೆ ಬಾವಿಯನ್ನು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯಕ್ಕೆ ಉಪಯೋಗಿಸಬಹುದಾಗಿದ್ದು, ವಿಶ್ವವಿದ್ಯಾಲಯದ ತಾಂತ್ರಿಕ ಸಿಬ್ಬಂದಿಯವರು ಸ್ಥಳ ಪರಿಶೀಲನೆ ಮಾಡಿ, 2012–13 ನೇ ಸಾಲಿನ ಗ್ರಾ.ಕು.ನೀ ಮತ್ತು ನೈ. ಇಲಾಖೆ, ಬೆಳಗಾವಿ ವೃತ್ತದ ದರ ಪಟ್ಟಿಯಂತೆ ಸದರಿ ಕೊಳವೆಬಾವಿಗೆ ರೂ. 44,000=00 ಮೊತ್ತಕ್ಕೆ ಅಂದಾಜು ಪತ್ರಿಕೆಯನ್ನು ತಯಾರಿಸಿರುತ್ತಾರೆ.

ಸದರಿ ಕೊಳವೆ ಬಾವಿಗೆ ಪರಿಹಾರ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ**

ಕಾರ್ಯನಿರ್ವಾಹಕ ಪರಿಷತ್ತು ವಿಷಯವನ್ನು ಸವಿವರವಾಗಿ ಚರ್ಚಿಸಿತು. ಈ ಹಿಂದೆ ಇಂತಹುದೇ ಸನ್ನಿವೇಶದಲ್ಲಿ ನಾಗಾವಿ ಗ್ರಾಮದ ಸರ್ವೆ ನಂ. 149/3 ರ ಶ್ರೀ ಹಸನ ಸಾಬ್ ಫಕೀರ್ ಸಾಬ ಪೀರಖಾನ ಅವರ ಜಮೀನಿನಲ್ಲಿದ್ದ ಕೊಳವೆ ಬಾವಿಗೆ ಪರಿಹಾರ ರೂಪದಲ್ಲಿ ರೂ. 43,950/– ನ್ನು ಪಾವತಿಸಿರುವ ಉದಾಹರಣೆ ಇರುವುದರಿಂದ, ಪ್ರಸ್ತುತ ನಾಗಾವಿ ಗ್ರಾಮದ ಸರ್ವೆ ನಂ. 144/3 ರ ಶ್ರೀ ರಾಮಪ್ಪ ತಿಮ್ಮಪ್ಪ ಪೂಜಾರ ಅವರಿಗೆ ಸೇರಿದ್ದ ಭೂಮಿಯಲ್ಲಿ ಸುಸ್ಥಿತಿಯಲ್ಲಿರುವ ಕೊಳವೆ ಬಾವಿಗೆ ಪರಿಹಾರವಾಗಿ ರೂ. 44,000/– ಪಾವತಿಸಲು ಕಾರ್ಯನಿರ್ವಾಹಕ ಪರಿಷತ್ತಿನ ನಿರ್ಣಯಿಸಿತು.

**RESOLUTION**

The Executive Council discussed the subject in detail. As there is a precedence of paying similar compensation of Rs. 43,950/- towards Borewell existed in the land in Sy.No. 149/3 of Nagavi Village belonging to Sri Hasansab Fakirsab Peerkhan, the Executive Council resolved to approve the proposal to pay compensation of Rs. 44,000/- to Shri Ramappa Thimmappa Poojara towards Borewell, existing in the land in Sy. No. 144/3 of Nagavi village, which is in good condition.

The meeting concluded with thanks to the Members and the Chair.

Vice Chancellor (Acting)
Chairperson & Registrar
Ex-Officio Member Secretary